

# ಪೂಜಾರ–100 ನಾಟ್‌ಔಟ್

**ಗಂಟೆಗಟ್ಟಲೆ ಬೌಂಡರಿ ಹೊಡೆಯದೇ ಗಟ್ಟಿಯಾಗಿ ನಿಂತು, ಬೌಲರ್‌ಗಳ ಗೋಳುಹೊಯ್ದುಕೊಳ್ಳುವ ಚೇತೇಶ್ವರ ಪೂಜಾರ ಅವರ ಆಟದ ಪರಿಗೆ ಸರಿಸಾಟಿ ಯಾರಿಹರು ಎನ್ನಬೇಕು. ಹಿಂದೆ ರಾಹುಲ್ ದ್ರಾವಿಡ್ ಅವರೂ ಟೆಸ್ಟ್ ಕ್ರಿಕೆಟ್‌ನಲ್ಲಿ ಈ ರೀತಿ ಆಡಿ ಎದುರಾಳಿಗಳನ್ನು ಕಾಡುತ್ತಿದ್ದರು.**

■ **ವಿಶಾಖ ಎನ್.**

ಚೇತೇಶ್ವರ ಪೂಜಾರ ಅತಿ ಹೆಚ್ಚು ಎಸೆತಗಳನ್ನು, 2484 ಚೆಂಡುಗಳನ್ನು ಆಡಿದ ವರ್ಷ 2017. ಅಷ್ಟು ಹೊತ್ತಿಗೆ ಅವರ ಟೆಸ್ಟ್ ಕ್ರಿಕೆಟ್‌ಗೆ ಎಂಟು ವರ್ಷ. 2010ರಲ್ಲಿ ಟೆಸ್ಟ್ ಆಡಲಾರಂಭಿಸಿದಾಗ ಅವರಿಗಿನ್ನೂ 22 ವರ್ಷ. ಆ ನಂತರ ಯಾವ ವರ್ಷವೂ ಆಡದಷ್ಟು ಎಸೆತಗಳನ್ನು 2017ರಲ್ಲಿ ಅವರು ಎದುರಿಸಿದ್ದರು. 18 ಇನಿಂಗ್ಸ್‌ಗಳಲ್ಲಿ ಅಷ್ಟೊಂದು ಎಸೆತಗಳನ್ನು ಆಡಿದ್ದರಲ್ಲೇ ಅವರ ಸಂಯಮದ ದರ್ಶನ ಕಾಣುತ್ತದೆ.

ಅದರ ಮರುವರ್ಷ 24 ಇನಿಂಗ್ಸ್‌ಗಳಲ್ಲಿ ಅವರು 2176 ಎಸೆತಗಳನ್ನು ಆಡಿದರು. ರನ್ ಗಳಿಕೆಯ ಸರಾಸರಿ ಮಾತ್ರ ಗಣನೀಯವಾಗಿ ಕಡಿಮೆಯಾಯಿತು. ಅವರ ವೃತ್ತಿಬದುಕಿನ ಇಷ್ಟು ವರ್ಷಗಳಲ್ಲಿ ಅತಿ ಹೆಚ್ಚು ಇನಿಂಗ್ಸ್ ಬ್ಯಾಟಿಂಗ್ ಮಾಡಿದ ವರ್ಷ 2021; ಟೆಸ್ಟ್ ಕ್ರಿಕೆಟ್ ತನ್ನ ವರ್ಚಸ್ಸು ಕಳೆದುಕೊಳ್ಳುತ್ತಿದೆಯಲ್ಲ ಎಂದು ನಾವು ಹಲಬುತ್ತಿದ್ದ ವರ್ಷ, ಕೋವಿಡ್ ಬಂದು ಕಾಡಿಹೋದ ನಂತರದ ವರ್ಷ.

2017ರಲ್ಲಿ ಹತ್ತಿರ ಹತ್ತಿರ 67ರ ಸರಾಸರಿಯಲ್ಲಿ ಪೂಜಾರ ರನ್ ಗಳಿಸಿದ್ದರು. 2021ರ ಹೊತ್ತಿಗೆ ಅದು 28 ಚಿಲ್ಲರೆಗೆ ಇಳಿಯಿತು. ಆದರೆ, ಆಡಿದ ಇನಿಂಗ್ಸ್‌ಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಆಯಿತು.

ಇಂತಹ ಅಂಕಿಅಂಶವು ಶ್ರಮಿಕನೊಬ್ಬನ ಹೋರಾಟ ಹಾಗೂ ದೀರ್ಘಾವಧಿ ಬದ್ಧತೆಗೆ ಸಾಕ್ಷ್ಯದಂತೆ ಕಾಣುತ್ತದೆ. ನೂರನೇ ಟೆಸ್ಟ್ ಆಡುವ ಮೂಲಕ ಇನ್ನೊಂದು ಮೈಲಿಗಲ್ಲು ದಾಟಿದ ಈ ದಿಗ್ಗಜ ಆಟಗಾರನ ಬ್ಯಾಟಿಂಗ್ ಸಂಯಮದ ಬಗೆಗೆ ಬರೆದಷ್ಟೂ ಕಡಿಮೆಯೇ.

ರಣಜಿ ಕ್ರಿಕೆಟ್ ಅನ್ನು ಚಿಮ್ಮುಹಲಗೆ ಎಂದು ನಂಬಿದ್ದ ಕಾಲವೀಗ ಮಸುಕಾಗುತ್ತಿರುವಾಗಲೂ ಪೂಜಾರ ಆ ಪ್ರಕಾರಕ್ಕೆ ಮೊದಲಿನಷ್ಟೇ ಗೌರವ ಕೊಡುತ್ತಾರೆ. ಈ ವರ್ಷ ಜನವರಿಯಲ್ಲಿ ಅವರು ಆಂಧ್ರ ವಿರುದ್ಧ ಆಡಿ, ಎಂಟು ರನ್‌ಗಳಿಂದ ರಣಜಿ ಶತಕ ತಪ್ಪಿಸಿಕೊಂಡ ಇನಿಂಗ್ಸ್ ಕಣ್ಣಿಗೆ ಕಟ್ಟಿದ ಹಾಗಿದೆ. ಆ ಪಂದ್ಯದಲ್ಲಿ ಸೌರಾಷ್ಟ್ರದ ಸೋಲಿನಲ್ಲಿಯೂ ಅವರ ಇನಿಂಗ್ಸ್ ಒಂದು ಘನತೆವೆತ್ತ ಪ್ರಾತ್ಯಕ್ಷಿಕೆಯಂತೆ ಇತ್ತು. ಹನ್ನೊಂದು ಬೌಂಡರಿಗಳನ್ನು ಒಳಗೊಂಡಿದ್ದ ಆ